ಸರ್ಕಾರ ನೀಡುತ್ತಿರುವ ರಜಾ ದಿನಗಳ ಕುರಿತು

51 (195) ಶ್ರೀ ಪಾಟೀಲ್ ಬಿ.ಸಿ.(ಹಿರೇಕೆರೂರು):– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಸರ್ಕಾರವು ಪ್ರತಿ ವರ್ಷ ನೀಡುತ್ತಿರುವ ಸರ್ಕಾರಿ ರಜಾ ದಿನಗಳೆಷ್ಟು;

ಆ) ಈವರೆವಿಗೂ ಪ್ರಮುಖ ವ್ಯಕ್ತಿಗಳ ಜಯಂತಿಗಳಿಗಾಗಿ ಎಷ್ಟು ರಜೆ ನೀಡಲಾಗಿದೆ;

ಇ) ಸರ್ಕಾರಿ ರಜೆಯನ್ನು ಇನ್ನೂ ಹೆಚ್ಚಿಸುವ ಯೋಜನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಆ ರಜೆಗಳು ಯಾವುವು (ವಿವರ ನೀಡುವುದು);

ಈ) ಸರ್ಕಾರಿ ರಜಾ ನೀಡುವಲ್ಲಿ ಸರ್ಕಾರ ಅನುಸರಿಸುತ್ತಿರುವ ಮಾನದಂಡವೇನು;

ಶ್ರೀ ಬಿ.ಎಸ್. ಯಡಿಯೂರಪ್ಪ(ಮಾನ್ಯ ಮುಖ್ಯ ಮಂತ್ರಿಗಳು):

ಅ) 2010ನೇ ವರ್ಷದಲ್ಲಿ 19 ದಿನಗಳು,
2011ನೇ ವರ್ಷದಲ್ಲಿ 22 ದಿನಗಳು,

ಆ) 2010ನೇ ವರ್ಷದಲ್ಲಿ – 3 ಪ್ರಮುಖ ವ್ಯಕ್ತಿಗಳ ಜಯಂತಿಗಾಗಿ ಮತ್ತು 2011ನೇ ವರ್ಷದಲ್ಲಿ 5 ಪ್ರಮುಖ ವ್ಯಕ್ತಿಗಳ ಜಯಂತಿಗಾಗಿ ರಜೆ ನೀಡಲಾಗಿದೆ.

ಇ) ಇಲ್ಲ.

ಈ) ರಾಷ್ಟ್ರೀಯ ಹಬ್ಬ, ರಾಷ್ಟ್ರೀಯ ರಜಾ ದಿನಗಳು (ಗಣರಾಜ್ಯೋತ್ಸವ, ಸ್ವಾತಂತ್ರ್ಯೋತ್ಸವ) ಧಾರ್ಮಿಕ ಹಬ್ಬಗಳ ಆಚರಣೆ ಸಂದರ್ಭಗಳಲ್ಲಿ ಸರ್ಕಾರಿ ರಜೆ ಘೋಷಿಸಲಾಗುತ್ತದೆ. ಈ ಕುರಿತು ಆಯುಕ್ತರು ಧಾರ್ಮಿಕ ದತ್ತಿ ಇಲಾಖೆ ಇವರು ಆಗಮ ಪಂಡಿತರೊಂದಿಗೆ ಸಮಾಲೋಚಿಸಿ ಹಾಗೂ ಮುಸ್ಲಿಂ ಬಾಂಧವರ ಹಬ್ಬಗಳ ಆಚರಣೆಯ ದಿನಾಂಕಗಳ ಬಗ್ಗೆ ಕರ್ನಾಟಕ ವಕ್ಫ್ ಮಂಡಳಿಯ ಸಹಮತಿಯೊಂದಿಗೆ ಸರ್ಕಾರಿ ರಜೆಗಳ ಪಟ್ಟಿಯನ್ನು ಸಚಿವ ಸಂಪುಟದ ಅನುಮೋದನೆ ಪಡೆದು ಘೋಷಿಸಲಾಗುವುದು.